# ಇಷ್ಟವಿಲ್ಲದೆ ಏನೆಲ್ಲ ಮಾಡಿದೆ



**ರಶ್ಮಿ ಜೆ.**
ಸ್ಟಾರ್‌ಸುವರ್ಣದ 'ಜಸ್ಟ್ ಮಾತ್ ಮಾತಲ್ಲಿ'ಯ ಸಿಂಧು

★ *ಅಭಿನಯಕ್ಕೆ ಹೊಂದಿಕೊಂಡಿದ್ದೀರಾ?*

ಆಕಸ್ಮಿಕ ಪ್ರವೇಶ ಮಾಡಿದ್ದರೂ ಇಲ್ಲಿನ ವಾತಾವರಣಕ್ಕೆ ಹೊಂದಿಕೊಂಡಿದ್ದೇನೆ. ಎಂಜಿನಿಯರಿಂಗ್ ಓದುವ ಬಗ್ಗೆ ಆಸಕ್ತಿನೇ ಇರಲಿಲ್ಲ. ನಮ್ಮ ಪೋಷಕರಿಗೆ ತಮ್ಮ ಮಗಳಿಗೆ ಎಂಜಿನಿಯರ್ ಮಾಡಬೇಕು ಎನ್ನುವ ಆಶೆ ಇತ್ತು. ಅವರ ಒತ್ತಾಯಕ್ಕೆ ನಾನು ಬಿಇ ಮುಗಿಸಿದೆ. ಅಷ್ಟರಲ್ಲಿ ಬೇರೆ ಏನಾದರೂ ಕ್ರಿಯಾಶೀಲವಾಗಿ ಮಾಡಬೇಕು ಎನ್ನುವ ತುಡಿತ ನನ್ನಲ್ಲಿ ಇತ್ತು. ಡಾನ್ಸ್– ಸಂಗೀತವನ್ನು ಕಲಿಯದಿದ್ದರೂ ನನಗೆ ಅದರ ಬಗ್ಗೆ ಒಲವು ಇತ್ತು. ಶಾಲಾ– ಕಾಲೇಜು ದಿನಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಮುಂದಿರುತ್ತಿದ್ದೆ. ಹೀಗಿದ್ದವಳಿಗೆ ನಟನೆಯ ಗೀಳಂತೂ ಸ್ವಲ್ಪವೂ ಇರಲಿಲ್ಲ. ಅಚಾನಕ್ಕಾಗಿ 'ಜೊತೆ ಜೊತೆಯಲಿ' ಧಾರಾವಾಹಿಗೆ ಆಡಿಷನ್ ಕೊಟ್ಟೆ. ಪಾತ್ರಕ್ಕೆ ಆಯ್ಕೆಯಾದೆ. ಅದಾದ ಮೇಲೆ 'ನೀ ಹಚ್ಚಿದ ಕುಂಕುಮ' 'ಮದುಮಗಳು'ವಿನಲ್ಲಿ ನಟಿಸಿದೆ. ಇದು ನನಗೆ ನಾಲ್ಕನೇ ಅವಕಾಶ. ಸದ್ಯ ಇದೇ ವೃತ್ತಿ ಎಂದು ಭಾವಿಸಿದ್ದೇನೆ.

★ *ಎಂಜಿನಿಯರಿಂಗ್ ಮಾಡಿ ನಟನೆ ಮಾಡುತ್ತಿದ್ದೇನೆ ಎನ್ನುವ ಬೇಸರ ಇದೆಯಾ?*

ಆರಂಭದಲ್ಲಿ ನಟನೆ ನನ್ನ ಆದ್ಯತೆ ಆಗಿರಲಿಲ್ಲ. ಹಾಗೆಂದು ಎಂಜಿನಿಯರ್ ಆಗುವುದು ಕೂಡ ಇಷ್ಟ ಇರಲಿಲ್ಲ. ಏನಾದರೂ ಹೊಸದನ್ನು ಮಾಡುವ ಬಯಕೆ ಇತ್ತು. ಅದನ್ನೀಗ ಅಭಿನಯದಲ್ಲಿಯೇ ಕಂಡುಕೊಂಡಿದ್ದೇನೆ. ಸದ್ಯ ಇದನ್ನೇ ಮಾಡುತ್ತೇನೆ. ಬೇರೆ ಇನ್ನೇನೋ ಮಾಡಬೇಕು ಎಂಬ ಯೋಚನೆಯೂ ಇಲ್ಲ. ಮುಂದೆ ಮದುವೆ ಗೃಹಿಣಿಯಾಗಿ ಉಳಿಯುವ ಸಾಧ್ಯತೆಯೂ ಇದೆ. ಒಂದು ಪಕ್ಷ ಕೆಲಸ ಮಾಡುವ ಅವಕಾಶ ಇದ್ದರೆ ಇಲ್ಲೇ ಇರುತ್ತೇನೆ. ಆಗಲೂ ಅವಕಾಶಗಳು ಇದ್ದೇ ಇರುತ್ತವೆ. ಅಕ್ಕ, ಚಿಕ್ಕಮ್ಮನ ಪಾತ್ರ ಅವೆಲ್ಲಾ ಮುಗಿದ ಬಳಿಕ ಅಮ್ಮನ ಪಾತ್ರಗಳೂ ಇರುತ್ತವೆ.

★ *ಹುಡುಗನ ನಿಶ್ಚಯವನ್ನು ಮಾಡಿಕೊಂಡಿದ್ದೀರಾ?*

ನನಗೆ ಮನೆಯಿಂದ ಯಾವುದೇ ನಿರ್ಬಂಧ ಇಲ್ಲ. ಇನ್ನೂ ಪ್ರೀತಿಗೀತಿ ಏನು ಇಲ್ಲ. ನನ್ನ ತಂದೆ ಜೈರಾಜ್, ಅಮ್ಮ ಡಯಾನಾ. ಅವರೂ ಪ್ರೀತಿಸಿ ಮದುವೆಯಾಗಿದ್ದಾರೆ. ಮೈಸೂರಿನ ಸಮೀಪದಲ್ಲಿ ತೋಟ ಇದೆ. ಅದನ್ನು ಅಪ್ಪ ನೋಡಿಕೊಳ್ಳುತ್ತಾರೆ. ಅಮ್ಮ ಚಿಕ್ಕಮ್ಮನ ಆಸ್ಪತ್ರೆಯಲ್ಲಿ ಸುಶ್ರೂಷಕಿಯಾಗಿದ್ದಾರೆ.

★ *'ಸಿಂಧು' ಆಗಿ ಹೇಳುವುದಾದರೆ...*

ತುಂಬಾ ಜವಾಬ್ದಾರಿಯನ್ನು ನಿರ್ವಹಿಸುವ ಹುಡುಗಿ. ವೃತ್ತಿಯಿಂದ ಶಿಕ್ಷಕಿಯಾದ ಆಕೆ ತುಂಬಾ ಗಂಭೀರತೆಯಿಂದಲೇ ಕಾಣಿಸಿಕೊಳ್ಳುತ್ತಾಳೆ. ಅವಳಿಗೂ ವಯೋಸಹಜ ತುಂಟಾಟಗಳು ಉಂಟು. ಆದರೆ ಅದನ್ನು ಹತ್ತಿಕ್ಕಿ ವೃತ್ತಿ ಧರ್ಮವನ್ನು ಮೆರೆಯುತ್ತಾಳೆ. ತನ್ನ ಪ್ರಿಯತಮನ ಹತ್ತಿರ ಮಾತ್ರ ತನ್ನ ಸಹಜ ಬಯಕೆಗಳನ್ನು ತೋರಿಸಿಕೊಳ್ಳುತ್ತಾಳೆ.

ತುಂಬಾ ಸೌಮ್ಯ ಸ್ವಭಾವದ ಆಕೆ, ತನ್ನದೇ ಆದ ಅನನ್ಯತೆಯನ್ನು ಉಳಿಸಿಕೊಂಡಿದ್ದಾಳೆ. ಅವಳದ್ದೇ ಎನ್ನುವ ಸ್ಟೈಲ್ ಇದೆ. ವ್ಯಾವಹಾರಿಕವಾಗಿ ಕೂಡ ತುಂಬಾ ಜಾಣೆ. ದೊಡ್ಡವರ ಜೊತೆ ಹೇಗೆ ವರ್ತಿಸಬೇಕು. ಚಿಕ್ಕವರ ಜೊತೆ ಹೇಗೆ ಮಾತನಾಡಬೇಕು ಎನ್ನುವ ಅರಿವೂ ಆಕೆಗೆ ಇದೆ. ಒಟ್ಟಾರೆ ಆ ಪಾತ್ರ ನನಗೂ ವೈಯಕ್ತಿಕವಾಗಿ ರೋಲ್ ಮಾಡೆಲ್ ಥರ ಇದೆ.

★ *ನಿಮ್ಮ ಅಭಿರುಚಿಗಳೇನು?*

ಊಟೋಪಚಾರದಲ್ಲಿ ಮಾಂಸಾಹಾರ ಇಷ್ಟ. ಉಡುಗೆ ತೊಡುಗೆಯಲ್ಲೂ ತೀರಾ ಆಧುನಿಕ ಶೈಲಿ ಇಷ್ಟ ಆಗುವುದಿಲ್ಲ. ಅರೆ ಆಧುನಿಕ ಎನ್ನಬಹುದು. ಸಂಪ್ರದಾಯ ಬದ್ಧವಾಗಿ ಇರಬೇಕು ಅನ್ನಿಸುತ್ತೆ. ಮೂಲತಃ ನಾನು ತೀರ ಸಾಮಾನ್ಯ ಹುಡುಗಿ. ಸಾಮಾನ್ಯರಂತೆಯೇ ಇರಬೇಕು ಅನ್ನಿಸುತ್ತದೆ. ದೇಶ ಸುತ್ತಾಡಬೇಕು ಎಂದರೆ ಆಸಕ್ತಿ ಬಂದುಬಿಡುತ್ತದೆ.

■ ರಾಗು